ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಧನ ಸಹಾಯಂ ನೀಡುವ ಕಾಲಾವಧಿ ಹೆಚ್ಚಿಸುವ ಬಗ್ಗೆ.

೭೧ ಶ್ರೀ ಬಸವರಾಜ ಪಾಟೀಲ್ (ಹುಮ್ನಾಬಾದ್).— ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ. ?

(ಅ) ಖಾಸಗಿ ಶಿಕ್ಷಣ ಸಂಸ್ಥೆಗಳು ಕಾಲೇಜುಗಳನ್ನು ಪ್ರಾರಂಭಿಸಿದಾಗ ಸರಕಾರದವರು ಮೂರು ವರ್ಷ ಮುಂಗಿದ ಕೂಡಲೇ ಧನ ಸಹಾಯ ನೀಡಬೇಕೆಂದು ಆಜ್ಞೆ ಇರುವುದೆ ?

(ಆ) ಹಾಗಿದ್ದಲ್ಲಿ ಆ ಆಜ್ಞೆಯನ್ನು ೫ ವರ್ಷಗಳ ಅವಧಿಗೆ ಸರಕಾರದವರು ಯಾವಾಗ ವಿಸ್ತರಿಸಿದರು ?

(ಇ) ಹಾಗಾದರೆ ಈ ಆಜ್ಞೆ ಹೊರಡುವ ಪೂರ್ವದಲ್ಲಿ ಪ್ರಾರಂಭವಾಗಿದ ಕಾಲೇಜುಗಳಿಗೆ ಮೂರು ವರ್ಷ ಮುಂಗಿದ ಕೂಡಲೇ ಧನ ಸಹಾಯ ನೀಡಲಾಗಿದೆಯೇ ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಇಲ್ಲ, ಕಾಲೇಜುಗಳು ಧನ ಸಹಾಯ ಪಡೆಯಲು ಅರ್ಹತೆಯನ್ನು ಮಾತ್ರ ಪಡೆಯುತ್ತಿದ್ದವು.

(ಆ) ೯-೪-೧೯೮೧ ರಿಂದ

(ಇ) ೩೧-೩-೧೯೮೧ರ ಮೊದಲು ಮೂರು ವರ್ಷ ಮುಗಿಸಿದ ಕಾಲೇಜುಗಳ ಧನ ಸಹಾಯ ಪಡೆಯಲು ಅರ್ಹತೆ ಪಡೆದಿವೆ.

ಬೀದರ್ ತಾಲ್ಲೂಕಿನ ಬಗದಲದೊಡ್ಡ ಗ್ರಾಮದಲ್ಲಿನ ಸರ್ಕಾರಿ ಸಂಯುಂಕ್ತ ಕಿರಿಯ ಮಹಾ ವಿದ್ಯಾಲಯದಲ್ಲಿ ಸ್ಥಳಾವಕಾಶದ ಕೊರತೆ.

೭೨ ಶ್ರೀ ಬಸವರಾಜ ಪಾಟೀಲ್ (ಹುಮ್ನಾಬಾದ್).— ಶಿಕ್ಷಣ ಮಂತ್ರಿಗಳು ಈ ಕೇಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬೀದರ್ ತಾಲ್ಲೂಕಿನಲ್ಲಿ ಬಗದಲಿ ದೊಡ್ಡ ಗ್ರಾಮದಲ್ಲಿರುವ ಸರಕಾರಿ ಸಂಯುಂಕ್ತ ಕಿರಿಯ ಮಹಾ ವಿದ್ಯಾಲಯದಲ್ಲಿ ಅತಿ ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳು ಓದುತ್ತಿದ್ದು ಅವರಿಗೆ ಕೂಡಲು ಸ್ಥಳವಿಲ್ಲದಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಈ ದಿಶೆಯಲ್ಲಿ ಸರಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

(ಅ) ಇದು ಮುಂಚೆ ಟಿ.ಡಿ.ಬಿ. ಸಂಸ್ಥೆಯಾಗಿದ್ದು ನಂತರ ಸರ್ಕಾರದ ವಶಕ್ಕೆ ತೆಗೆದುಂಕೊಳ್ಳಲಾಗಿದೆ, ಈ ಬಗ್ಗೆ ಪ್ರಸ್ತಾವನೆಯು ಸರಕಾರದ ಗಮನಕ್ಕೆ ಬಂದಿಲ್ಲ.

(ಆ) ಪ್ರಸ್ತಾವನೆ ಬಂದ ಮೇಲೆ ಕಟ್ಟಡ ಅನುದಾನಕ್ಕೋಸ್ಕರ ಪರಿಶೀಲಿಸಲಾಗುವುದು.

ನಗರ ಪ್ರದೇಶಗಳಲ್ಲಿನ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳ ನಿರ್ಮಾಣ.

೭೩ ಶ್ರೀ ಬಸವರಾಜ ಪಾಟೀಲ್ (ಹುಮ್ನಾಬಾದ್).— ಶಿಕ್ಷಣ ಮಂತ್ರಿಗಳು ಈ ವಿಷಯುಗಳನ್ನು ದಯೆಯಿಟ್ಟು ತಿಳಿಸುವರೇ.—

(ಅ) ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ಕಟ್ಟಲು ಸರಕಾರದವರ ಧನ ಸಹಾಯ ಯೋಜನೆಗಳು ಸಹ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ :

(ಆ) ಹಾಗಿದ್ದಲ್ಲಿ, ಅಲ್ಲಿಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವಶ್ಯಕವಾದ ಕಟ್ಟಡಗಳಿಗೆ ಯಾವುದಾದರೂ ಯೋಜನೆಗಳನ್ನು ರೂಪಿಸಲಾಗಿದೆಯೇ ;

(ಇ) ಈ ಯೋಜನೆಯ ವಿವರಗಳೇನು ;

(ಈ) ಈ ಯೋಜನೆಗಳನ್ನು ಎಂದು ಕಾರ್ಯರೂಪಕ್ಕೆ ತರಲಾಗುವುದು ?

* * *

---

* Reply not received.